2 ಎಚ್ಚ ಬೀಜಗಳನ್ನು ಹೊರತುಪಡಿಸಿ ಟೀ, ಕಾಫಿ ಮತ್ತು ಹತ್ತಿಯೂ ಬೀಜ ತೆಗೆದಿರುವ ಅಥವಾ ತೆಗೆಯದಿರುವ) ಸೇರಿದಂತೆ ಕೃಷಿ ಉತ್ಪನ್ನ.

** ** **

W.D. 1824

ಅನುಬಂಧ = II

ಕರ್ನಾಟಕ ವಿಧಾನಸಭೆ
ಒಂಬತ್ತನೆಯ ವಿಧಾನಸಭೆ
(ಏಳನೆಯ ಅಧಿವೇಶನ)
(ಮುಂದುವರಿದ ಉಪದೇಶನಗಳು)

ಭಾರತ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ವಿಧೇಯಕ, 1992.
(1992ರ 20ನೇ ಸಂಖ್ಯೆಯ ವಿಧಾನಸಭಾ ವಿಧೇಯಕ)

1986ರ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮವನ್ನು ತಿದ್ದುಪಡಿ ಮಾಡುವ ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ 1986ರ ಭಾರತದ ರಾಷ್ಟ್ರೀಯ, ಕಾನೂನು ವಿದ್ಯಾಲಯ ಅಧಿನಿಯಮವನ್ನು (1986ರ ಕರ್ನಾಟಕ ಅಧಿನಿಯಮ 22) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ :

ಇದು ಭಾರತ ಗಣರಾಜ್ಯದ ನಲವತ್ತೊರನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ : –(1) ಈ ಅಧಿನಿಯಮವನ್ನು ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

(2) ಇದು 1992ರ ಮೇ ಹದಿನಾಲ್ಕನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 9ನೇ ಪ್ರಕರಣದ ತಿದ್ದುಪಡಿ –(ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿತವಾಗುವ) 1986ರ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮದ (1986ರ ಕರ್ನಾಟಕ ಅಧಿನಿಯಮ 22), 9ನೇ ಪ್ರಕರಣದ (1) ನೇ ಉಪ–ಪ್ರಕರಣದಲ್ಲಿ "ಸರ್ವೋಚ್ಚ ಪ್ರಾಧಿಕಾರ" ಎಂಬ ಪದಗಳಿಗೆ ಬದಲಾಗಿ "ಮುಖ್ಯ ಸಲಹಾ ನಿಕಾಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. ಅನುಸೂಚಿಯ ತಿದ್ದುಪಡಿ : ಮೂಲ ಅಧಿನಿಯಮದ ಅನುಸೂಚಿಯಲ್ಲಿ 5ನೇ ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಪ್ರತಿಯೋಜಿಸತಕ್ಕದ್ದು; ಎಂದರೆ:–

5. ಮಹಾಪರಿಷತ್ತಿನ ಅಧಿಕಾರಿಗಳು –ಮಹಾಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(1) ವಿದ್ಯಾಲಯದ ಸ್ಥೂಲ ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ ಪುನರೀಕ್ಷಿಸುವುದು ಮತ್ತು ವಿದ್ಯಾಲಯದ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಕ್ರಮಗಳನ್ನು ಸೂಚಿಸುವುದು.

(2) ವಾರ್ಷಿಕ ವರದಿ, ಹಣಕಾಸು ಅಂದಾಜುಗಳು, ಮತ್ತು ಅಂಥ ಲೆಕ್ಕಪತ್ರಗಳ ಮೇಲಿನ ಲೆಕ್ಕ ಪರಿಶೋಧನಾ ವರದಿಯ ಬಗ್ಗೆ ಗೊತ್ತುವಳಿಗಳನ್ನು ಪರಿಗಣಿಸಿ ಅಂಗೀಕರಿಸುವುದು.

(3) ವಿದ್ಯಾಲಯದ ದಕ್ಷ ಕಾರ್ಯ ನಿರ್ವಹಣೆ ಮತ್ತು ಆಡಳಿತ ನಿರ್ವಹಣೆಗಾಗಿ ಅದು ಅವಶ್ಯಕವೆಂದು ಭಾವಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

4. ನಿರಸನ ಮತ್ತು ಉಳಿಸುವಿಕೆಗಳು : —(1) ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ, 1992ನ್ನು (1992ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 3) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನವಾಗಿದ್ದರೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕೃತ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದ ಮೂಲ ಅಧಿನಿಯಮದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು

ಉದ್ದೇಶಗಳ ಮತ್ತು ಕಾರಣಗಳ ಹೇಳಿಕೆ

1986ರ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮದ 9ನೇ ಪ್ರಕರಣದಡಿ ಮಹಾಪರಿಷತ್ತನ್ನು ಸರ್ಕೋಚ್ಚ ಪ್ರಾಧಿಕಾರ ಎಂಬುದಾಗಿ ವಿವರಿಸಲಾಗಿದೆ. ಮಹಾಪರಿಷತ್ತಿನ ಪಾತ್ರವು ಸಲಹಾ ಸ್ವರೂಪವಾದ್ದರಿಂದ, ಮಹಾಪರಿಷತ್ತನ್ನು ಮುಖ್ಯ ಸಲಹಾ ನಿಕಾಯವೆಂದು ವಿವರಿಸಲು ಉದ್ದೇಶಿಸಲಾಗಿದೆ ಮತ್ತು ಮಹಾಪರಿಷತ್ತಿನ ಅಧಿಕಾರಗಳನ್ನು ಸೂಕ್ತವಾಗಿ ಮಾರ್ಪಾಟುಗೊಳಿಸುವುದು ಅವಶ್ಯಕವೆಂದೂ ಸಹ ಪರಿಗಣಿಸಲಾಗಿದೆ. ಈ ಪ್ರಸ್ತಾಪವು ವಿಶ್ವವಿದ್ಯಾಲಯ ಅನುದಾನ ಆಯೋಗವು ಮಾಡಿದ ಸಲಹೆಗನುಸಾರವಾಗಿದೆ.

ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶ, 1992ರ ಬದಲಾಗಿ ಈ ವಿಧೇಯಕವನ್ನು ಮಂಡಿಸಲು ಉದ್ದೇಶಿಸಲಾಗಿದೆ.

ಆದ್ದರಿಂದ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆರ್ಥಿಕ ಜ್ಞಾಪನಾ ಪತ್ರ

ಪ್ರಸ್ತಾವಿತ ತಿದ್ದುಪಡಿಯಿಂದ ಯಾವುದೇ ವೆಚ್ಚ ಉಂಟಾಗುವುದಿಲ್ಲ.

ಬ್ಲೇಸಿಯಸ್ ಎ. ಡಿಸೋಜ
ಕಾನೂನು ಸಚಿವರು

ಮ. ಇನ್ನಾಸಪ್ಪ
ಕಾರ್ಯದರ್ಶಿ

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 79ನೇ ನಿಯಮದ ಮೇರೆಗೆ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

1986ರ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮದ 9ನೇ ಪ್ರಕರಣದಡಿ ಮಹಾಪರಿಷತ್ತನ್ನು ಸರ್ವೋಚ್ಚ ಪ್ರಾಧಿಕಾರ ಎಂಬುದಾಗಿ ವಿವರಿಸಲಾಗಿದೆ. ಮಹಾಪರಿಷತ್ತಿನ ಪಾತ್ರವು ಸಲಹಾ ಸ್ವರೂಪದಾದ್ದರಿಂದ, ಮಹಾಪರಿಷತ್ತನ್ನು ಮುಖ್ಯ ಸಲಹಾ ನಿಕಾಯವೆಂದು ವಿವರಿಸಲು ಉದ್ದೇಶಿಸಲಾಗಿದೆ ಮತ್ತು ಮಹಾಪರಿಷತ್ತಿನ ಅಧಿಕಾರಗಳನ್ನು ಸೂಕ್ತವಾಗಿ ಮಾರ್ಪಾಟುಗೊಳಿಸುವುದು ಅವಶ್ಯಕವೆಂದೂ ಸಹ ಪರಿಗಣಿಸಲಾಗಿದೆ. ಈ ಪ್ರಸ್ತಾಪವು ವಿಶ್ವವಿದ್ಯಾಲಯ ಅನುದಾನ ಆಯೋಗವು ಮಾಡಿದ ಸಲಹೆಗನುಸಾರವಾಗಿದೆ.

ಕರ್ನಾಟಕ ವಿಧಾನಪರಿಷತ್ತು ಅಧಿವೇಶನದಲ್ಲಿದ್ದುದರಿಂದ ಮತ್ತು ನಿಯಮವು ತುರ್ತು ಸ್ವರೂಪದ್ದಾಗಿರುವುದರಿಂದ 1992ರ ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ (ತಿದ್ದುಪಡಿ) ಅಧ್ಯಾದೇಶವನ್ನು ಪ್ರಖ್ಯಾಪಿಸಲಾಯಿತು.

ಅನುಬಂಧ

ಭಾರತದ ರಾಷ್ಟ್ರೀಯ ಕಾನೂನು ವಿದ್ಯಾಲಯ ಅಧಿನಿಯಮ 1986 (1986ರ ಕರ್ನಾಟಕ ಅಧಿನಿಯಮ 22) ರಿಂದ ಉದ್ಧೃತ ಭಾಗಗಳು).

** ** **

9. ಮಹಾಪರಿಷತ್ತು : – ಮಹಾಪರಿಷತ್ತು ವಿದ್ಯಾಲಯದ ಸರ್ವೋಚ್ಚ ಪ್ರಾಧಿಕಾರವಾಗಿರತಕ್ಕದ್ದು.

ಅನುಸೂಚಿ

1. **
2. **
3. **
4. **

5. ಮಹಾಪರಿಷತ್ತಿನ ಅಧಿಕಾರಗಳು : – (1) ಕಾರ್ಯನಿರ್ವಾಹಕ ಪರಿಷತ್ತು ಶೈಕ್ಷಣಿಕ ಪರಿಷತ್ತು ಹಣಕಾಸು ಸಮಿತಿ ಮತ್ತು ಇತರ ಎಲ್ಲ ಸಮಿತಿಗಳ ಕ್ರಮವನ್ನು ಪುನರೀಕ್ಷಿಸುವ ಅಧಿಕಾರ ಹಾಗೂ ಕಾರ್ಯನಿರ್ವಾಹಕ ಪರಿಷತ್ತು ಮಾಡಿದ ವಿನಿಮಯಗಳನ್ನು ಪುನರೀಕ್ಷಿಸುವ ಅಧಿಕಾರವೂ ಸೇರಿದಂತೆ ವಿದ್ಯಾಲಯದ ಆಡಳಿತ ನಿರ್ವಹಣೆ ಅಥವಾ ನಿರ್ವಹಣೆಗೆ ಅಥವಾ ಅದರ ವ್ಯವಹಾರಗಳನ್ನು ನಡೆಸುವುದಕ್ಕೆ ಆಗತ್ಯವಾದ ಎಲ್ಲ ಅಧಿಕಾರಗಳನ್ನು ಮಹಾಪರಿಷತ್ತು ಹೊಂದಿರತಕ್ಕದ್ದು.

(2) ಉಪ ಖಂಡ (1)ರಿಂದ ಪ್ರದತ್ತವಾದ ಅಧಿಕಾರಗಳ ಸಾಮಾನ್ಯತೆಗೆ ಭಾದಕವಾಗದಂತೆ, ಮಹಾಪರಿಷತ್ತು –

(ಎ) ವಿದ್ಯಾಲಯದ ಸ್ಥೂಲ ಕಾರ್ಯನೀತಿಗಳು ಮತ್ತು ಕಾರ್ಯಕ್ರಮಗಳನ್ನು ಶಿಫಾರಸ್ಸು ಮಾಡುವುದು ಮತ್ತು ವಿದ್ಯಾಯಲಯದ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಕ್ರಮಗಳನ್ನು ಸೂಚಿಸತಕ್ಕದ್ದು.

(ಬಿ) ವಾರ್ಷಿಕ ವರದಿ, ಹಣಕಾಸು ಅಂದಾಜುಗಳು ಮತ್ತು ಅಂಥ ಲೆಕ್ಕಪತ್ರಗಳ ಬಗೆಗಿನ ಲೆಕ್ಕ ಪರಿಶೋಧನಾ ವರದಿಯ ಮೇಲೆ ಗೊತ್ತುವಳಿಗಳನ್ನು ಹೊರಡಿಸುವುದು.

(ಸಿ) ವಿದ್ಯಾಲಯದ ದಕ್ಷ ಕಾರ್ಯನಿರ್ವಹಣೆ ಮತ್ತು ಆಡಳಿತ ನಿರ್ವಹಣೆಗಾಗಿ ಅದು ಅವಶ್ಯಕವೆಂದು ಭಾವಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

ಅನುಬಂಧ – III

ಕರ್ನಾಟಕ ವಿಧಾನಸಭೆ

ಒಂಭತ್ತನೆಯ ವಿಧಾನಸಭೆ

ಏಳನೇ ಅಧಿವೇಶನ

(ಮುಂದುವರಿದ ಉಪವೇಶನಗಳು)

ಕರ್ನಾಟಕ ಧನ ವಿನಿಯೋಗ (ಸಂಖ್ಯೆ : 3) ವಿಧೇಯಕ 1992

(ವಿಧಾನ ಸಭಾ ವಿಧೇಯಕ ಸಂಖ್ಯೆ : 24)

1992–93 ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡಲು ಒಂದು ವಿಧೇಯಕ.

1992–93ನೇ ಹಣಕಾಸು ವರ್ಷದ ಸೇವೆಗಳಿಗಾಗಿ ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಆ ಪೈಕಿಯಿಂದ ಕೆಲವು ಅಧಿಕ ಮೊತ್ತಗಳ ಸಂದಾಯ ಮತ್ತು ವಿನಿಯೋಗಕ್ಕಾಗಿ ಅಧಿಕಾರ ನೀಡುವುದು ಯುಕ್ತವಾಗಿರುತ್ತದೆ.

ಇದು ಭಾರತ ಗಣರಾಜ್ಯದ ನಲವತ್ತಮೂರನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗಲಿ,

1. ಸಂಕ್ಷಿಪ್ತ ಹೆಸರು : ಈ ಅಧಿನಿಯಮವನ್ನು ಕರ್ನಾಟಕ ಧನವಿನಿಯೋಗ (ನಂ. 3) ಅಧಿನಿಯಮ, 1992 ಎಂದು ಕರೆಯತಕ್ಕದ್ದು.

2. ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ 1992–93ನೇ ಹಣಕಾಸು ವರ್ಷಕ್ಕಾಗಿ 117,93,47,000 ರೂಪಾಯಿಗಳ ನೀಡಿಕೆ.– ಅನುಸೂಚಿಯ 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಸೇವೆಗಳ ಸಂಬಂಧದಲ್ಲಿ, 1992–93ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಸುವ ಹಲವಾರು ಖರ್ಚುಗಳನ್ನು ಪೂರೈಸುವುದಕ್ಕಾಗಿ ಅನುಸೂಚಿಯ 5ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಮೊತ್ತದಲ್ಲಿ ನೂರಹದಿನೇಳು ಕೋಟಿ ಹೊಂಬತ್ತಮೂರು ಲಕ್ಷದ ನಲವತ್ತೇಳು ಸಾವಿರ ರೂಪಾಯಿಗಳಿಗೆ ಮೀರದಷ್ಟು ಮೊಬಲಗನ್ನು ಮಾತ್ರ ಕರ್ನಾಟಕ ರಾಜ್ಯ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡತಕ್ಕದ್ದು ಮತ್ತು ಉಪಯೋಗಿಸತಕ್ಕದ್ದು.

3. ಧನವಿನಿಯೋಗ : ಈ ಅಧಿನಿಯಮದ ಮೂಲಕ, ಕರ್ನಾಟಕ ರಾಜ್ಯದ ಸಂಚಿತ ನಿಧಿಯಿಂದ ಮತ್ತು ಅದರೊಳಗಿಂದ ಸಂದಾಯ ಮಾಡಲು ಮತ್ತು ಉಪಯೋಗಿಸಲು ಅಧಿಕಾರ ನೀಡಲಾದ ಮೊತ್ತಗಳನ್ನು ಸದರಿ ವರ್ಷಕ್ಕೆ ಸಂಬಂಧಪಟ್ಟಂತೆ ಅನುಸೂಚಿಯಲ್ಲಿ ತಿಳಿಸಲಾದ ಸೇವೆಗಳು ಮತ್ತು ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

ಅನುಸೂಚಿ

(2 ಮತ್ತು 3ನೇ ಪ್ರಕರಣಗಳನ್ನು ನೋಡಿ)

	ಸೇವೆಗಳು ಮತ್ತು ಉದ್ದೇಶಗಳು		ಮೀರದ ಮೊಬಲಗು		ಒಟ್ಟು
			ವಿಧಾನ ಸಭೆಯಿಂದ ಪುರಸ್ಕೃತವಾದುದನ್ನು	ಸಂಚಿತ ನಿಧಿಯಿಂದ ಪ್ರಭೃತವಾದುದನ್ನು	
1	2		3	4	5
5	ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು)	ಬಂಡವಾಳ	2,85,81,000		2,85,81,000
7	ಚಿಕ್ಕಪುಟ್ಟ ಉದ್ಯಮಗಳು	ರಾಜಸ್ವ	9,36,00,000		9,36,00,000
10	ಉಚ್ಚ ಶಿಕ್ಷಣ	ರಾಜಸ್ವ	6,56,00,000		6,56,00,000
11	ಯುವಜನ ಸೇವೆ	ರಾಜಸ್ವ	1,00,00,000		1,00,00,000
21	ಆಹಾರ ಮತ್ತು ನಿತ್ಯೋಪಯೋಗಿ ಸಾಮಗ್ರಿಗಳ ಸರಬರಾಜು	ರಾಜಸ್ವ	12,50,000	1,40,000	13,90,000
		ಬಂಡವಾಳ	37,50,000		37,50,000
23	ರಾಜ್ಯದ ಅಬಕಾರಿ	ರಾಜಸ್ವ	8,00,00,000		8,00,00,000
25	ಪೋಲೀಸ್ ಮತ್ತು ಆಗಿ ಶಾಮಕ ಸೇವೆಗಳು	ರಾಜಸ್ವ	4,50,00,000		4,50,00,000
27	ವಾರ್ತಾ ಮತ್ತು ಪ್ರವಾಸೋದ್ಯಮ	ರಾಜಸ್ವ	42,00,000		42,00,000
28	ರಸ್ತೆ ಸಾರಿಗೆ	ರಾಜಸ್ವ	25,00,00,000		25,00,00,000
29	ವೈದ್ಯಕೀಯ ಕುಟುಂಬ ಕಲ್ಯಾಣ ಮತ್ತು ಜನಾರೋಗ್ಯ ಸೇವೆಗಳು	ರಾಜಸ್ವ	5,00,00,000		5,00,00,000

1.	2		3	4	5
34	ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ				
	ನಿಯಂತ್ರಣ ಯೋಜನೆಗಳು	ಬಂಡವಾಳ	4,43,00,000	2,15,00,000	6,58,00,000
40	ಜಿಲ್ಲಾಪರಿಷತ್	ರಾಜಸ್ವ	24,20,000		24,20,000
41	ಸಾಮಾನ್ಯ ಆಡಳಿತ ಇತ್ಯಾದಿ	ರಾಜಸ್ವ	1,58,10,000		1,58,10,000
42	ಯೋಜನೆ ಮತ್ತು ಸಾಂಖ್ಯಿಕ ಪರಿಣಾಮ ಅಭಿಯಾಚನೆಗಳು				
	ಇತ್ಯಾದಿ	ರಾಜಸ್ವ	10,00,00,000		10,00,00,000
45	ರಸ್ತೆಗಳು ಮತ್ತು ಸೇತುವೆಗಳು	ಬಂಡವಾಳ	7,50,00,000		7,50,00,000
53	ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳನ್ನು ಹೊರತುಪಡಿಸಿ)	ಬಂಡವಾಳ	4,16,70,000		4,16,70,000
57	ಕಾರ್ಮಿಕ ಮತ್ತು ಉದ್ಯೋಗ	ರಾಜಸ್ವ	9,97,60,000		9,97,60,000
58	ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದವರ ಕಲ್ಯಾಣ	ರಾಜಸ್ವ	7,59,70,000		7,59,70,000
59	ಮಹಿಳೆ ಮತ್ತು ಮಕ್ಕಳ ಕಲ್ಯಾಣ	ಬಂಡವಾಳ	6,00,00,000		6,00,00,000
		ರಾಜಸ್ವ	10,09,60,000		10,09,60,000
60	ವಿಜ್ಞಾನ ಮತ್ತು ತಂತ್ರಜ್ಞಾನ	ರಾಜಸ್ವ	25,00,000		25,00,000
	ಜಮ್ಮು	ರಾಜಸ್ವ	90,44,06,000	1,40,000	90,45,46,000
		ಬಂಡವಾಳ	25,33,01,000	2,15,00,000	27,48,01,000
		ಒಟ್ಟು ಮೊತ್ತ	116,77,07,000	2,16,40,000	117,93,47,000

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

1992–93ನೇ ಹಣಕಾಸು ವರ್ಷದಲ್ಲಿ ಸಂದಾಯ ಮಾಡುವಾಗ ಒದಗಿಬರುವ ತಲವಾರು ಖರ್ಚುಗಳನ್ನು ಪೂರೈಸುವುದಕ್ಕಾಗಿ ಅಗತ್ಯವಿರುವ ಮತ್ತಷ್ಟು ಹಣವನ್ನು ರಾಜ್ಯದ ಸಂಚಿತ ನಿಧಿಯಿಂದ ವಿನಿಯೋಗಿಸಲು ಭಾರತ ಸಂವಿಧಾನದ 205 (1)(ಎ) ಅನುಚ್ಛೇದದ ಉಪ–ಬಂಧಗಳಿಗನುಸಾರವಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಎಸ್. ಬಂಗಾರಪ್ಪ
ಮುಖ್ಯಮಂತ್ರಿಗಳು

ಎಂ. ಇಬ್ರಾಹಿಮ್,
ಕಾರ್ಯದರ್ಶಿ